

# ಶ್ರೀ ಪಾಂಡುರಂಗ ವಿಠ್ಠಲ

## ನೆಲೆ - ಹಿನ್ನೆಲೆ

❑ ಶ್ರೀ ರಾಮಪ್ರಸಾದ್

**ಮಂಗಳಮಯ ತುಂಗಭದ್ರದಿ ಮೆರೆವನ**
**ಅಂಗಜಪಿತ ಶ್ರೀ ಲಕ್ಷ್ಮೀಪತಿಯ**
**ಶೃಂಗಾರ ಮೂರುತಿ ಪುರಂದರ ವಿಠಲನ**
**ಕಂಗಳಿಂದಲಿ ಕಂಡೆ ಹಿಂಗಿತು ಭವಭಯ !**

ನೀವು ಹಂಪೆಗೆ ಹೋಗಿದ್ದಿರಾದರೆ, ಅಲ್ಲಿರುವ ಎರಡು ಮುಖ್ಯವಾದ ಗುಡಿಗಳನ್ನು ನೋಡಿಯೇ ಇರುತ್ತೀರಿ. ಒಂದು ಪಂಪಾಪತಿ ವಿರೂಪಾಕ್ಷ ಶಿವನ ರೂಪವಾದರೆ, ಮತ್ತೊಂದು, ಊರಿನ ಮತ್ತೊಂದು ತುದಿಯಲ್ಲಿರುವ ವಿಜಯ ವಿಟ್ಠಲನ ಗುಡಿ. ಪುರಂದರದಾಸರು ತುಂಗಭದ್ರಾ ತೀರದಲ್ಲಿ ಮೆರೆಯುವ ಶೃಂಗಾರಮೂರುತಿಯೆಂದು ಹಾಡಿ ಹೊಗಳುತ್ತಿರುವುದು ಈ ವಿಜಯವಿಠಲನನ್ನೇ. ಆದರೆ, ಇಂದು ನೀವು ವಿಜಯ ವಿಟ್ಠಲನ ಗುಡಿಯಲ್ಲಿ ನೋಡಿದರೆ, ಮೂಲ ಮೂರ್ತಿಯೇ ಇಲ್ಲ, ಕೇವಲ ಹೊರಗಿನ ಗೋಪುರದ ಮೇಲೆ ವಿಟ್ಠಲ ರುಕುಮಾಯಿಯರನ್ನು ನೋಡಿ ಮರಳಬೇಕಷ್ಟೆ. ಹಾಗಿದ್ದರೆ, ಇಲ್ಲಿ ಗರ್ಭಗುಡಿಯಲ್ಲಿದ್ದ ವಿಟ್ಠಲ ಏನಾದ? ಹಂಪೆಯನ್ನು ಆಕ್ರಮಣಕಾರರು ಹಾಳುಗೆಡವಿದಾಗ ಇಲ್ಲಿಯ ಮೂರ್ತಿ ಮಾಯವಾಯಿತೇ?

ಇಂದು ವಿಟ್ಠಲನ ಕ್ಷೇತ್ರವಾಗಿ ಪ್ರಸಿದ್ಧವಾಗಿರುವುದು ಪಂಢರಪುರ. ಮಹಾರಾಷ್ಟ್ರದಲ್ಲಿ ಇಂದು ಎಲ್ಲಕ್ಕಿಂತ ಹೆಚ್ಚು ಭಕ್ತರು ನಡೆದುಕೊಳ್ಳುವ ಕ್ಷೇತ್ರವೆಂದರೆ ಪಂಡರಪುರವೇ. ಇಲ್ಲಿಗೆ ನೆರೆಯ ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಿಂದ ಬರುವ ಭಕ್ತರ ಸಂಖ್ಯೆಯೂ ಗಣನೀಯವಾಗಿದೆ. ಭೀಮಾ ನದಿಯ ಬಲ ದಡದಲ್ಲಿರುವ ಸೋಲಾಪುರ ಜಿಲ್ಲೆಯ ಪಂಡರಾಪುರ, ಈಗಿನ ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಗಡಿಗೆ ಬಹಳ ಸಮೀಪದಲ್ಲಿದೆ. ಈ ಸ್ಥಳದಲ್ಲಿ, ಭೀಮಾನದಿಯು ಅರ್ಧಚಂದ್ರದ ಆಕೃತಿಯಲ್ಲಿ ಹರಿಯುವುದರಿಂದ ಭೀಮೆಗೆ ಚಂದ್ರಭಾಗಾ ಎಂದೂ ಹೆಸರು ಬಂದಿದೆ. ಕನ್ನಡನಾಡಿನ ಹರಿದಾಸರು ಕೂಡ ಕೆಲವು ರಚನೆಗಳಲ್ಲಿ ಪಂಢರಪುರದ ವಿಟ್ಠಲನನ್ನು ಹೆಸರಿಸಿದ್ದಾರೆ. ವಿಟ್ಠಲನಿಗೆ ವಿಠೋಬ, ಪಾಂಡುರಂಗ ಎಂಬ ಹೆಸರುಗಳೂ ಇವೆ. ವಿಠೋಬಾ ಎಂದರೆ ವಿಟ್ಠಲ ಬಾಬಾ- ಎಂದರೆ ತಂದೆ ವಿಟ್ಠಲ ಎನ್ನುವುದರ ಚಿಕ್ಕ ರೂಪವೆಂದು ಮರಾಠಿ ಮಾತನಾಡುವವರು ಹೇಳುವ ಮಾತು.

ಕೆಲವು ದಂತಕಥೆಗಳ ಪ್ರಕಾರ, ಈಗ ಪಂಢರಪುರದಲ್ಲಿರುವ ವಿಠೋಬನೇ ಒಂದು ಕಾಲದಲ್ಲಿ ಈ ಗುಡಿಯಲ್ಲಿದ್ದ ಹಂಪೆಯ ವಿಜಯವಿಟ್ಠಲ. ವಿಜಯನಗರ ಸಾಮ್ರಾಜ್ಯ 1565ರಲ್ಲಿ ಕೊನೆಗೊಂಡಾಗ, ಇಲ್ಲಿಂದ ವಿಟ್ಠಲಮೂರ್ತಿಯನ್ನು ತೆಗೆದುಕೊಂಡು ಹೋಗಿ ಪಂಢರಪುರದಲ್ಲಿ ಪ್ರತಿಷ್ಠಾಪಿಸಲಾಯಿತು. ಆದರೆ, ಅದಕ್ಕೂ ಮೊದಲಿನಿಂದಲೇ ಪಂಢರಪುರವು ವಿಟ್ಠಲನು ನೆಲೆಸಿರುವ ಯಾತ್ರಾಸ್ಥಳವೆಂದೇ ಹೆಸರಾಗಿತ್ತು ಎನ್ನುವುದಕ್ಕೆ ಹಲವು ಆಧಾರಗಳಿವೆ. ಇದೊಂದು ವಿರೋಧಾಭಾಸದಂತೆ ಕಾಣುತ್ತೆ ಅಲ್ಲವೇ? ಇದರ



ಹಂಪಿಯ ವಿಜಯವಿಟ್ಠಲ ದೇವಾಲಯ

ರಹಸ್ಯ ತಿಳಿಯುವ ಮೊದಲು ಸ್ವಲ್ಪ ವಿಟ್ಠಲನ ಹಿನ್ನೆಲೆ ತಿಳಿಯೋಣ.

## ವಿಟ್ಠಲನ ಹಿನ್ನೆಲೆ, ಮತ್ತು ಕನ್ನಡನಾಡಿನ ಜೊತೆ ವಿಟ್ಠಲನ ಸಂಬಂಧ :

ಪಂಢರಪುರವನ್ನು ಹಿಂದಿನ ಶಾಸನ, ದಾಖಲೆಗಳಲ್ಲಿ ಪಂಢರಿಗೆ, ಪಂಡರಂಗೆ, ಪಂಡರಗೆ, ಪಾಂಡುರಂಗ ಕ್ಷೇತ್ರ ಎನ್ನುವ ಬೇರೆ ಬೇರೆ ಹೆಸರಲ್ಲಿ ಕರೆಯಲಾಗಿದೆ. ಪಂಡರಗೆ ಎನ್ನುವ ಹೆಸರೂ ಕೂಡ ಅಚ್ಚ ಕನ್ನಡದ್ದೇ. ಇದು ಕನ್ನಡದ ಪಂದರ (ಎಂದರೆ ಹಂದರ) ಎನ್ನುವ ಪದದಿಂದ ಬಂದಿದೆ ಎಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ. ಇಲ್ಲಿ ದೊರೆತ ಒಂದು ಶಾಸನದಲ್ಲಿ ಈ ಊರಿನ ಸುತ್ತಮುತ್ತಲೂ ಹಂದರಗಳ ಮೇಲೆ ದ್ರಾಕ್ಷಿಬಳ್ಳಿಗಳನ್ನು ಬೆಳೆಸಿರುವ ವಿಷಯವಿದೆಯಂತೆ. ಆದ್ದರಿಂದಲೇ ಈ ಊರಿಗೆ ಮೂಲದಲ್ಲಿ ಪಂದರಿಗೆ ಎಂದು ಹೆಸರಿದ್ದು, ಅದು ಕಾಲಾನುಕ್ರಮದಲ್ಲಿ ಪಂಡರಿಗೆ ಆಗಿರಬೇಕೆನ್ನುವುದು ಒಂದು ತರ್ಕ. 13ನೇ ಶತಮಾನದ ಅನಂತರ ಬಂದ ಮರಾಠಿ ಸಂತರಾದ ಜ್ಞಾನೇಶ್ವರ (ಕ್ರಿ.ಶ. 1275-1296), ನಾಮದೇವ (ಕ್ರಿ.ಶ. 1270-1350), ಏಕನಾಥ (ಕ್ರಿ.ಶ. 1533-1599), ತುಕಾರಾಮ್ (ಕ್ರಿ.ಶ.1577-1650), ಮೊದಲಾದವರೂ, ಕನ್ನಡ ನಾಡಿನ ಹರಿದಾಸರಾದ ಪುರಂದರ ದಾಸ, ಕನಕದಾಸ, ವಿಜಯದಾಸ, ಗೋಪಾಲದಾಸ ಮೊದಲಾದವರೆಲ್ಲ ವಿಟ್ಠಲನ ಭಕ್ತರೇ. ಹರಿದಾಸರಲ್ಲಿ ಹೆಚ್ಚಿನವರು ತಮ್ಮ ಅಂಕಿತದಲ್ಲಿ ವಿಟ್ಠಲ ಎಂದು ಸೇರಿಸಿಕೊಳ್ಳುವುದನ್ನು (ಉದಾ: ಶ್ರೀಪಾದರಾಯರು (ಕ್ರಿ.ಶ.1404-1502)ರ ಅಂಕಿತ ರಂಗವಿಟ್ಠಲ. ಪುರಂದರದಾಸ (ಕ್ರಿ.ಶ. 1484-1564)ರ ಅಂಕಿತ ಪುರಂದರ ವಿಟ್ಠಲ) ನಾವಿಲ್ಲಿ ನೆನೆಯಬಹುದು.

ವಿಟ್ಠಲನ ಪಂಥ ಸುಮಾರು 10-12ನೇ ಶತಮಾನದಿಂದ ಈಗಿನ ಮಹಾರಾಷ್ಟ್ರ-ಕರ್ನಾಟಕಗಳ ಸಂಧಿ ಭಾಗದಲ್ಲಿ ಆರಂಭವಾಯಿತೆಂದು ಹೇಳುವುದಕ್ಕೆ ಆಧಾರಗಳಿವೆ. ಈ ಮಧ್ಯಕಾಲೀನ ಮರಾಠೀ ಭಕ್ತರಲ್ಲಿ ಹಲವರು ವಿಟ್ಠಲನನ್ನು ಕಾನಡೀ ವಿಟ್ಠಲ, ಕರ್ನಾಟಕೂ ವಿಟ್ಠಲ ಎಂದರೆ, ಕನ್ನಡದ, ಕರ್ನಾಟಕದ ವಿಟ್ಠಲ ಎಂದು ಕರೆದಿರುವುದು ಒಂದು ಗಮನಿಸಬೇಕಾದ ವಿಚಾರ. ನಮಗೆ ಹೊರಗಿನಿಂದ ಬಂದ, ಅಥವಾ ಬೇರೆ ಕಡೆಯಿಂದ ಬಂದ ಏನನ್ನಾದರೂ ನಮ್ಮದಾಗಿ ಮಾಡಿಕೊಳ್ಳುವಾಗ, ಅದರ ಮೂಲವನ್ನೂ ಹೆಸರಿನಲ್ಲೇ ಸೂಚಿಸುವುದೊಂದು ರೂಢಿ. ಹಾಗಾಗಿಯೇ ಪಕ್ಕದ ಕನ್ನಡದ ನೆಲದಿಂದ ಬಂದ ವಿಟ್ಠಲನನ್ನು ಮರಾಠಿಯಲ್ಲಿ 'ಕಾನಡೀ' ವಿಟ್ಠಲ ಎಂದರೆ ಅದು ಸೂಕ್ತವೇ ಆಗಿದೆ. ಮರಾಠಿಯಲ್ಲಿ, ಕನ್ನಡ ಭಾಷೆಗೂ, ಕನ್ನಡಿಗರಿಗೂ ಈಗಲೂ ಕಾನಡೀ ಎಂದೇ ಹೇಳುವುದನ್ನು ನಾವು ಗಮನಿಸಬಹುದು.

ಸಂತ ಜ್ಞಾನೇಶ್ವರನು ತನ್ನ ಒಂದು ಅಭಂಗದಲ್ಲಿ ''ಕಾನಡಾ ಹೋ ವಿಟ್ಠಲು ಕರ್ನಾಟಕು, ಯೇಣೇ ಮಝುಲಾವಿಲೇ ವೇದು'' ಎಂದರೆ, ''ಕನ್ನಡದ, ಕರ್ನಾಟಕದ ವಿಟ್ಠಲ ನನ್ನ ಮನಸ್ಸನ್ನು ಸೆಳೆದೊಯ್ದ'' ಎನ್ನುತ್ತಾನೆ. ಅಂತೆಯೇ, ನಾಮದೇವನು ಒಂದು ಅಭಂಗದಲ್ಲಿ ''ಕಾಶಿಯೇ ಕನೌಜು ದ್ವಾರಕೇ ಗುರ್ಜರು ಕಾನಡಾ ವಿಟ್ಠಲು ಪಂಡರೀಯೆ'', ಎಂದರೆ, ''ಕನೋಜಿನಲ್ಲಿರುವ ಕಾಶಿಯಂತೆ, ಗುಜರಾತಿನಲ್ಲಿರುವ ದ್ವಾರಕೆಯಂತೆ, ಕಾನಡೀ (ಕನ್ನಡದ) ವಿಟ್ಠಲನು ಪಂಢರಿಯಲ್ಲಿ (ಎಂದರೆ ಪಂಢರಪುರದಲ್ಲಿ)'' ಎನ್ನುತ್ತಾನೆ. ಇನ್ನೊಂದು ಅಭಂಗದಲ್ಲಿ ನಾಮದೇವನೇ ''ಕಾನಡಾ ವಿಟ್ಠಲ ವೋ ಉಭಾ ಭೀವರೇತೀರೀ'' ಎಂದರೆ, ''ಕನ್ನಡದ ವಿಟ್ಠಲನು ಎದ್ದು ನಿಂತ'' ಎಂದರೆ, ಮತ್ತೊಂದರಲ್ಲಿ ''ವಿಟ್ಠಲ ಕಾನಡೇ ಬೋಲೂ ಜಾಣೇ, ತ್ಯಾಚೀ ಭಾಷಾ ಪುಂಡಲೀಕ ನೇಣೇ'' ಎಂದರೆ, ''ವಿಟ್ಠಲನು ಮಾತನಾಡುವನು ಕನ್ನಡ, ಅದನೇ ಮರುನುಡಿಯುವನು ಪುಂಡಲೀಕ'' ಎಂದು. ಸಂತ ಏಕನಾಥನು ''ತೀರ್ಥ ಕಾನಡೇ ದೇವ ಕಾನಡೇ ಕ್ಷೇತ್ರ ಕಾನಡೇ ಪಂಡರಿಯೇ'' ಎಂದರೆ, ''ತೀರ್ಥವೂ ಕನ್ನಡ, ದೇವನೂ ಕನ್ನಡ, ಪಂಡರೀ ಕ್ಷೇತ್ರವೂ ಕನ್ನಡ'' ಎಂದು ಹೇಳಿದ್ದಾನೆ. ಇದನ್ನೆಲ್ಲ ನೋಡಿದಾಗ, ವಿಟ್ಠಲನನ್ನು ಭಜಿಸುವ ಪಂಥ ಕನ್ನಡನಾಡಿನಲ್ಲೇ ಆರಂಭವಾಗಿದ್ದಿರಬೇಕು ಎನ್ನುವುದಕ್ಕೆ ಪುಷ್ಟಿ ದೊರೆಯುತ್ತದೆ.

ಕೆಲವು ವಿದ್ವಾಂಸರು ಬೌದ್ಧ ಧರ್ಮದ ಪ್ರಭಾವದಿಂದ ವಿಟ್ಠಲನ ಭಕ್ತಿ ಸಂಪ್ರದಾಯ ಆರಂಭವಾಯಿತು ಎಂಬ ವಾದವನ್ನು ಮುಂದಿಟ್ಟಿದ್ದಾರಾದರೂ, ವಿಟ್ಠಲನೆಂದರೆ ವಿಷ್ಣುವಿನ ರೂಪವೆಂಬುದು ಸತ್ಯಕ್ಕೆ ಹತ್ತಿರವಾಗಿದೆ. ಪಂಢರಪುರದ ವಿಟ್ಠಲನನ್ನು ಸಾಧಾರಣವಾಗಿ ಕೃಷ್ಣನ ರೂಪವೆಂದೇ ಪರಿಗಣಿಸಲಾಗುತ್ತೆ. ವಿಟ್ಠಲನು ವಿಷ್ಣು-ಶಿವ ಇಬ್ಬರ ಪ್ರತೀಕವೆಂದೂ ಹೇಳುವವರಿದ್ದಾರೆ. ಇನ್ನೊಂದು ವಿಶೇಷವೆಂದರೆ ಬೇರೆ ವಿಷ್ಣು ಮಂದಿರಗಳಲ್ಲಿರುವಂತೆ ವಿಟ್ಠಲನೊಡನೆ ಲಕ್ಷ್ಮೀದೇವಿಯ ಜೊತೆಗೆ ರುಕುಮಾಯಿ, ಅಥವಾ ರುಕ್ಮಿಣಿ ಇದ್ದಾಳೆ. ಅಲ್ಲದೆ ವಿಠೋಬನು ಇವನು ಕೃಷ್ಣನಂತೆ ಕೈಯಲ್ಲಿ ಕೊಳಲು ಹಿಡಿದಿಲ್ಲದೆ, ಸೊಂಟದ ಮೇಲೆ ಕೈಯಿಟ್ಟು ನಿಂತಿರುವುದೊಂದು ವಿಶೇಷ. ವಿಷ್ಣು ಎಂಬ ಹೆಸರು ಕನ್ನಡಕ್ಕೆ ಬಂದಾಗ ಬಿಟ್ಟು ಎಂದಾಗುತ್ತೆ. ಅದೇ ವಿಟ್ಠಲ ಎಂಬ ರೂಪ ತಾಳಿದೆ ಎಂಬ ಅನಿಸಿಕೆಯೂ ಕೂಡ ಇದೆ.

ಮೊದಲು ಪಂಢರಪುರದ ದೇವಾಲಯದ ಇತಿಹಾಸ, ಅಲ್ಲಿ ಸಿಕ್ಕ ಶಾಸನಾಧಾರಗಳ ಬಗ್ಗೆ ಸ್ವಲ್ಪ ಪರಿಚಯ ಮಾಡಿಕೊಂಡು ಅನಂತರ ವಿಟ್ಠಲ ಸೊಂಟದ ಮೇಲೆ ಕೈಯಿಟ್ಟಿರುವುದು ಯಾಕೆ ಎನ್ನುವುದರ ಬಗ್ಗೆ ಪ್ರಚಲಿತದಲ್ಲಿರುವ ಕಥೆಗಳನ್ನು ನೋಡೋಣ.

## ಚಾರಿತ್ರಿಕ ಹಿನ್ನೆಲೆ ಮತ್ತು ಶಾಸನಾಧಾರಗಳು :

ಕ್ರಿ.ಶ. 1140ರ ಹೊಯ್ಸಳ ವೀರಬಲ್ಲಾಳನ ಶಾಸನವೊಂದರಲ್ಲಿಯೂ ವಿಟ್ಠಲದೇವನನ್ನು ಸ್ತುತಿಸಿದ್ದಾನೆ. ಅದು ಪಂಢರಪುರದ ಬಗ್ಗೆ ಹೇಳುವುದಿಲ್ಲವಾದರೂ, ಆ ಸಮಯಕ್ಕೆ, ವಿಟ್ಠಲನ ಪೂಜೆಯಂತೂ ಇತ್ತು ಎಂಬುದು ತಿಳಿದುಬರುತ್ತದೆ. ಸುಮಾರು 13ನೇ ಶತಮಾನದಲ್ಲೇ ಪಂಢರಿಗೆಯಲ್ಲಿ ವಿಠೋಬನ ದೇವಾಲಯವಿದ್ದದ್ದಕ್ಕೆ ಶಾಸನಾಧಾರವಿದೆ. ಪಂಢರಪುರದಲ್ಲಿ ದೊರೆತಿರುವ 1270ರ ಯಾದವರ ಮಹಾದೇವನ ಶಾಸನದಲ್ಲಿ, ಈ ಊರನ್ನು ಪಾಂಡುರಂಗಪುರವೆಂದು ಕರೆಯುವುದರಿಂದ ಆ ಕಾಲಕ್ಕಾಗಲೇ ಈ ಊರು ಪಾಂಡುರಂಗನ ನೆಲೆಯಾಗಿತ್ತು ಎಂದು ತಿಳಿದುಬರುತ್ತದೆ. ಕ್ರಿ.ಶ. 1237ರ ಹೊಯ್ಸಳ ಸೋಮೇಶ್ವರನದೆಂದು ಊಹಿಸಲಾದ ಶಾಸನವು ಈಗ ಪಂಢರಪುರದ ವಿಟ್ಠಲನ ದೇವಾಲಯದಲ್ಲಿರುವ ಸೋಲಾಖಂಬ (ಹದಿನಾರು ಕಂಬದ) ಮಂಟಪದಲ್ಲಿರುವ ತೊಲೆಯ ಮೇಲಿದೆ. ಈ ತೊಲೆ ಮೊದಲು ಈ ಗುಡಿಯ ಯಾವುದೋ ಬಾಗಿಲಿನ ಮೇಲಿನ ವಾಡದ ತೊಲೆಯಾಗಿರುವುದು ಅದರ

## ಪಂಢರಪುರ ಎಲ್ಲಿದೆ ?



ಶ್ರೀ ಶ್ರೀ ವಿಟ್ಠಲ ರುಕುಮಾಯಿ

ಪಂಢರಪುರ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಸೋಲಾಪುರದಿಂದ ಸಾತಾರಾಗೆ ಹೋಗುವ ದಾರಿಯಲ್ಲಿ, ಸೋಲಾಪುರದ ಪಶ್ಚಿಮಕ್ಕೆ ಸುಮಾರು 70 ಕಿ.ಮೀ. ದೂರದಲ್ಲಿರುವ ಈ ಊರು ಭೀಮಾ ನದಿಯ ದಂಡೆಯಲ್ಲಿದೆ. ಮಹಾರಾಷ್ಟ್ರದ ಎಲ್ಲ ಪ್ರಮುಖ ಸ್ಥಳಗಳಿಂದ, ಅಲ್ಲದೆ ಕರ್ನಾಟಕದ ಹಲವು ಕಡೆಗಳಿಂದ ಇಲ್ಲಿಗೆ ಹೋಗಲು ವಾಹನ ಸೌಕರ್ಯ ಇದೆ. ದಕ್ಷಿಣ ಮಧ್ಯ ರೈಲ್ವೆಯ ಮಿರಜ್‌ನಿಂದ ಕುರ್ಡುವಾಡಿಗೆ ಹೋಗುವ ರೈಲುದಾರಿಯಲ್ಲಿ ಪಂಢರಪುರ ನಿಲ್ದಾಣ ಸಿಗುತೆ. ಮಹಾರಾಷ್ಟ್ರದ ಎಲ್ಲೆಡೆಗಳಿಂದ ಮತೆ ಉತರ ಕರ್ನಾಟಕದಿಂದ ಬಹಳ ಜನ ಭಕರು ಪಂಢರಪುರದ ಯಾತ್ರೆ ಮಾಡುತಾರೆ. ಪ್ರತಿ ವರ್ಷ ಆಷಾಢ ಏಕಾದಶಿಯ ಸಂದರ್ಭದಲ್ಲಿ ಇಲ್ಲಿ ಎಂಟು- ಹತು ಲಕ್ಷ ಜನ ನೆರೆಯುತ್ತಾರೆ. ಅಲ್ಲದೆ ಪ್ರತಿ ಬುಧವಾರಗಳಂದೂ ಇಲ್ಲಿ ವಿಶೇಷ ಪೂಜೆಗಳು ಜರುಗುತ್ತವೆ.

ಕಟ್ಟಡದಿಂದ ತಿಳಿದುಬರುತ್ತದೆ. ಈ ಶಾಸನವು ಭೀಮರಥಿಯ ದಡದಲ್ಲಿರುವ ಪಂಡರಗೆಯ ವಿಟ್ಠಲನಿಗೆ ಕೆಲವು ಹಳ್ಳಿಗಳನ್ನು ದತ್ತಿ ಬಿಟ್ಟಿರುವ ವಿಷಯವನ್ನು ಅರುಹುತ್ತದೆ. ಇದೇ ಶಾಸನವೇ ಈ ದೇವಸ್ಥಾನವನ್ನು ವಿಸ್ತರಿಸುವ, ಜೀರ್ಣೋದ್ಧಾರ ಮಾಡುವ ಕೆಲಸಗಳ ಬಗ್ಗೆ ಮಾತನಾಡುತ್ತದೆ. ಇದನ್ನು ಕೆಲವರು ಯಾದವರ ಸೋಮೇಶ್ವರನ ಶಾಸನವೆಂದು ಹೆಸರಿಸಿದ್ದರೂ, ದೇವಗಿರಿಯ ಯಾದವರಲ್ಲಿ ಈ ಸಮಯದಲ್ಲಿ ಸೋಮೇಶ್ವರನೆಂಬ ರಾಜ ಇಲ್ಲದಿದ್ದದ್ದು ಯೋಚಿಸಬೇಕಾದ ಅಂಶ. ಮೊದಮೊದಲು ಹೊಯ್ಸಳರ ಹಲವು ಶಾಸನಗಳಲ್ಲಿ ಅವರನ್ನೂ ಯಾದವರೆಂದು ಕರೆದಿದ್ದರೂ, 13ನೇ ಶತಮಾನದ ಕಡೆಯ ವೇಳೆಗೆ ಅವರು ತಮ್ಮ ಹೊಯ್ಸಳರೆಂಬ ಹೆಸರನ್ನು ಬಿಟ್ಟು ಯಾದವರೆಂಬ ಹೆಸರನ್ನು ದಾಖಲಿಸಿದ್ದಿರಬಹುದೇ ಎಂಬುದೂ ಪ್ರಶ್ನೆಯಾಗಿ ನಿಲ್ಲುತ್ತದೆ. ಈ ಶಾಸನ ಬರೆಸಿದ ಸೋಮೇಶ್ವರ ಹೊಯ್ಸಳ ಸೋಮೇಶ್ವರನದ್ದೇ ಆಗಿರಲಿ, ಅಥವಾ ದೇವಗಿರಿಯ ರಾಜರಲ್ಲಿ ಸೋಮೇಶ್ವರನೆಂಬ ಎರಡನೇ ಹೆಸರುಳ್ಳ ಇನ್ನೊಬ್ಬ ಅರಸನದೇ ಆಗಿರಲಿ, 13ನೇ ಶತಮಾನದ ಮಧ್ಯಭಾಗದಲ್ಲಾಗಲೇ ಈ ಕ್ಷೇತ್ರ ವಿಟ್ಠಲನ ಕ್ಷೇತ್ರವಾಗಿ ಹೆಸರುಗಳಿಸಿತ್ತು ಎನ್ನುವುದಂತೂ ಖಚಿತವಾಗುತ್ತದೆ. ಆ ವೇಳೆಗಾಗಲೇ ಈಗಿರುವ ದೇವಸ್ಥಾನದ ಕೆಲವು ಮೂಲ ಭಾಗಗಳಾದರೂ ಇದ್ದಿರಬೇಕು, ಮತ್ತೆ ಆಗಲೇ ದೇವಸ್ಥಾನದ ಕಟ್ಟಡಗಳನ್ನು ದುರಸ್ತಿಪಡಿಸುವ, ಅಥವಾ ಹಿರಿದಾಗಿಸುವ ವಿಷಯ ಇರುವುದರಿಂದ, ಆಗ ದೇವಾಲಯ ಅಷ್ಟು ಕಾಲಕ್ಕಾಗಲೇ ಹಳತಾಗಿದ್ದಿರಬೇಕು. ಅಂದರೆ 1237ಕ್ಕಿಂತ ಹಲವಾರು ದಶಕಗಳು ಮೊದಲೇ ಈ ದೇವಾಲಯ ಇತ್ತು ಎಂಬುದು ಸಾಬೀತಾಗುತ್ತದೆ. ಅನಂತರ ವಿಶಾಲವಾಗಿ ವಿಸ್ತರಿಸಲ್ಪಟ್ಟಿರುವ ಈ ದೇವಾಲಯದಲ್ಲಿ ಈಗ ಇರುವ ಕಟ್ಟಡಗಳಲ್ಲಿ ಬಹುಪಾಲು 17ನೇ ಶತಮಾನದ ಅನಂತರ ಕಟ್ಟಲ್ಪಟ್ಟವು.

ವಿಟ್ಠಲನ ಮೂಲ ಮೂರ್ತಿ ಶೈಲಿಯ ದೃಷ್ಟಿಯಿಂದ ಇದು ಶಾಸನಾಧಾರಗಳು ತೋರುತ್ತಿರುವ 11-12ನೇ ಶತಮಾನಕ್ಕಿಂತ ಹಳೆಯದಿರಬೇಕೆಂಬ ಅಭಿಪ್ರಾಯ ಇದೆ. ಗುಪ್ತರ ಕಾಲ (4-6ನೇ ಶತಮಾನ) ದ ವಿಗ್ರಹಗಳ ಛಾಯೆ ಇದರಲ್ಲಿದೆ. ವಿಟ್ಠಲನ ತಲೆಯ ಮೇಲೆ ಇರುವ ಕಿರೀಟವು ಟೋಪಿಯಾಕಾರದಲ್ಲಿದೆ. ಬಾದಾಮಿಯ ಗುಹೆಗಳಲ್ಲಿರುವ ಕೆಲವು ಮೂರ್ತಿಗಳಲ್ಲಿ (ಕ್ರಿ.ಶ.6-7ನೇ ಶತಮಾನ) ಈ ರೀತಿಯ ಕಿರೀಟವು ಕಂಡು ಬರುತ್ತದೆ. ಆದರೆ, ವಿಟ್ಠಲನ ಮೂರ್ತಿಯ ಕಿರೀಟ ಬಾದಾಮಿಯ ಕಿರೀಟಗಳಿಗಿಂತ ಸರಳವಾಗಿರುವುದೂ, ಈ ಮೂರ್ತಿಯನ್ನು 6ನೇ ಶತಮಾನದ್ದೆಂದು ಹೇಳಲು ಒಂದು ಕಾರಣ. ಬೇರೆಲ್ಲೋ ಇದ್ದ ಮೂರುತಿ 11-12ನೇ ಶತಮಾನಕ್ಕೆ ಮೊದಲು ಪಂಢರಪುರಕ್ಕೆ ಬಂದಿರಬಹುದೆಂಬ ಊಹೆ ಸೂಕ್ತವಾಗುತ್ತದೆ.

ಪದ್ಮಪುರಾಣದಲ್ಲಿಯೂ ಭೀಮರಥಿಯ ದಡದಲ್ಲಿರುವ ಪಾಂಡುರಂಗ ವಿಟ್ಠಲನ ಪ್ರಸ್ತಾಪ ಇದೆ. ಪುರಾಣಗಳು ಸುಮಾರು 1ರಿಂದ 5ನೇ ಶತಮಾನದ ಕಾಲದಲ್ಲಿ ರಚಿಸಿರುವುದೆಂದು ಊಹೆ. ಆದರೆ, ಪುರಾಣಗಳಲ್ಲಿನ ಕೆಲವು ಭಾಗಗಳು ಮೂಲಕ್ಕಿಂತ ಸ್ವಲ್ಪ ಕಾಲಾನಂತರ ಸೇರಿಸಲ್ಪಟ್ಟ ಅಂಶಗಳಾಗಿರಬಹುದು ಎಂದು ಕೆಲವರು ತರ್ಕ ಮಾಡಿದ್ದಾರೆ. ಹಾಗಾಗಿ, ಆರನೇ ಶತಮಾನಕ್ಕೆ ಮೊದಲೇ ಈ ಕಥೆ ಪುರಾಣದಲ್ಲಿ ಸೇರಿತ್ತೇ ಇಲ್ಲವೇ, ಅಥವಾ ಅನಂತರ ಸೇರಿಸಿರುವುದೇ ಎನ್ನುವುದನ್ನು ಖಡಾಖಂಡಿತವಾಗಿ ಹೇಳಲಾಗುವುದಿಲ್ಲ. ಹಾಗಾಗಿ, 6ರಿಂದ 11ನೇ ಶತಮಾನಗಳ ನಡುವೆ, ವಿಠಲನ ಮೂಲ ದೇಗುಲವನ್ನು ಕಟ್ಟಿರಬಹುದೆಂದು ಅಂದಾಜು ಮಾಡಬಹುದು. ಈ ಪುರಾಣಗಳೇ ಅಲ್ಲದೆ, ಹದಿಮೂರನೆಯ ಶತಮಾನದಲ್ಲಿ ಬಿಲ್ವಮಂಗಲನೆಂಬ ಸಂಸ್ಕೃತ ಕವಿ ತನ್ನ ಕೃಷ್ಣಕರ್ಣಾಮೃತದಲ್ಲಿ, ಮತ್ತೆ ಚೌಡರಸನೆಂಬ ಕವಿ ತನ್ನ ಕನ್ನಡದ ಅಭಿನವ ದಶಕುಮಾರ ಚರಿತೆಯಲ್ಲಿ ವಿಠಲನನ್ನು ಸ್ತುತಿಸಿದ್ದಾರೆ.

ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ ಮೊದಲಾದ ಸಂತರು ಆಗಿಹೋದ ಮಹಾರಾಷ್ಟ್ರದ ಭಕ್ತಿ ಸಂಪ್ರದಾಯಕ್ಕೆ ವಾರಕರಿ ಸಂಪ್ರದಾಯವೆಂದು ಹೆಸರು. ಇವರೆಲ್ಲ ಮರಾಠಿ ಭಾಷೆಯಲ್ಲಿ ಮುಖ್ಯವಾಗಿ ವಿಟ್ಠಲನನ್ನು ಕುರಿತು ಕವಿತೆಗಳನ್ನ ರಚಿಸಿದ್ದಾರೆ. ಇವುಗಳಿಗೆ ಅಭಂಗಗಳೆಂದು ಹೆಸರು. ವಾರಕರಿ ಸಂಪ್ರದಾಯಕ್ಕೆ ಸೇರಿದ ಸಂತರು ಢಾಂಬಿಕ ಆಚರಣೆಗಳಿಗೆ ಹೆಚ್ಚಿಗೆ ಗಮನ ಕೊಡದೆ, ಭಕ್ತಿಯೊಂದೇ ಪ್ರಧಾನವೆಂದು ಭಾವಿಸಿದವರು. ಜಾತಿ ಮತಗಳ ಭೇದವಿಲ್ಲದೆ ಎಲ್ಲರೂ ಒಟ್ಟಿಗೆ, ವರ್ಷ ವರ್ಷ ಎರಡು ಬಾರಿ, ಆಷಾಢ ಏಕಾದಶಿ ಮತ್ತು ಕಾರ್ತಿಕ ಏಕಾದಶಿಗಳಂದು ಪಂಢರಪುರಕ್ಕೆ ಯಾತ್ರೆ ಹೋಗಿ ವಿಟ್ಠಲನ ದರ್ಶನ ಮಾಡುವುದಕ್ಕೆ ಈ ಸಂಪ್ರದಾಯದಲ್ಲಿ ಬಹಳ ಹೆಚ್ಚಿನ ಮಹತ್ತ್ವವಿತ್ತು. ಇಂದಿಗೂ ಕೂಡ ಆ ದಿನಗಳಂದು ಪಂಢರಪುರಕ್ಕೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹೋಗುತ್ತಾರೆ.

## ಭಕ್ತ ಪುಂಡಲೀಕ ಕಥೆ

ಮಹಾರಾಷ್ಟ್ರದಲ್ಲಿ ಹೆಚ್ಚಿಗೆ ಪ್ರಚಲಿತದಲ್ಲಿರುವ ಕಥೆಯೊಂದರ ಪ್ರಕಾರ ಪುಂಡಲೀಕನೆಂಬ ಹರಿಭಕ್ತನೊಬ್ಬ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ಅವನ ಭಕ್ತಿಗೆ ಮೆಚ್ಚಿ ವಿಷ್ಣುವೇ ಅವನ ಮನೆಗೆ ಬಂದುಬಿಟ್ಟ. ಆಗ, ಪುಂಡಲೀಕನು ತನ್ನ ತಂದೆತಾಯಿಯರ ಸೇವೆಯಲ್ಲಿ ನಿರತನಾಗಿದ್ದ. ತಂದೆ-ತಾಯಿಯರೇ ಎಲ್ಲರಿಗೂ ಮಿಗಿಲೆಂದು ಬಗೆದ ಪುಂಡಲೀಕನು, ವಿಷ್ಣುವಿನತ್ತ ಒಂದು ಇಟ್ಟಿಗೆಯನ್ನು ಎಸೆದು, ತಾನು ಬರುವವರೆಗೆ ಅದರ ಮೇಲೇ ನಿಲ್ಲಬೇಕೆಂದು ಹೇಳಿದನಂತೆ. ಸರಿ, ವಿಷ್ಣು ಸೊಂಟದ ಮೇಲೆ ಕೈ ಹೊತ್ತು ಪುಂಡಲೀಕನ ಬರವನ್ನೇ ಕಾಯುತ್ತಿದ್ದಾನಂತೆ. ಆದರೆ ಪುಂಡಲೀಕ ಅವನ ತಂದೆತಾಯಿಯರನ್ನು ಬಿಟ್ಟು ಬರದೇ ಇದ್ದುದರಿಂದ, ವಿಟ್ಠಲನು ಅಲ್ಲೇ ಕಲ್ಲಾಗಿ ನಿಂತುಬಿಟ್ಟನಂತೆ. ಈ ಕಥೆಯೇ, ಚೂರುಪಾರು ಬದಲಾವಣೆಗಳಿಂದ ಹಲವಾರು ಶತಮಾನಗಳಿಂದ ಚಾಲ್ತಿಯಲ್ಲಿದೆ.

ಪದ್ಮಪುರಾಣದಲ್ಲಿ ವಿಠೋಬನ ಕುರಿತ ಕಥೆ ಹೀಗಿದೆ: ಬೃಂದಾವನದಿಂದ ಒಮ್ಮೆ ರಾಧೆಯು ದ್ವಾರಕೆಗೆ ಬಂದಳಂತೆ. ಕೃಷ್ಣನು ರಾಧೆಯ ಜೊತೆಗೆ ತನಗಿಂತಲೂ ಹೆಚ್ಚು ಸಲಿಗೆಯಿಂದಿರುವುದನ್ನು ಕಂಡು ರುಕ್ಮಿಣಿಗೆ ಸಹಿಸಲಾಗದೇ, ([illegible]) ಬಳಿಯ ದಿಂಡವನಕ್ಕೆ ನಡೆದಳು. ಕೃಷ್ಣನು ರುಕ್ಮಿಣಿಯನ್ನು ಮನ್ನಿಸೆಂದು ಕೋರಲು ಅವಳನ್ನು ಹಿಂಬಾಲಿಸಿದ. ರುಕ್ಮಿಣಿಯ ಕೋಪ ಇಳಿಯಲಿಲ್ಲವಾಗಿ, ಅವನು ತನ್ನ ಭಕ್ತ ಪುಂಡಲೀಕನನ್ನು ನೋಡಲು ಅವನ ಮನೆಗೆ ನಡೆದ. ಅಲ್ಲಿ ನಡೆದದ್ದೆಲ್ಲ ಈ ಹಿಂದೆ ಹೇಳಿದಂತೆಯೇ. ಆಮೇಲೆ, ಕೋಪವಿಳಿದ ಮೇಲೆ ರುಕ್ಮಿಣಿಯೂ ಅಲ್ಲಿಗೇ ಬಂದು ವಿಠೋಬನೊಡನೆ ನೆಲೆನಿಂತಳಂತೆ. ಈಗ ಪಂಢರಪುರದಲ್ಲಿ ಪುಂಡಲೀಕನಿಗೂ ಕೂಡ ಒಂದು ಗುಡಿ ಇದೆ. ಅದು ಅವನ ಸಮಾಧಿ- ಯಿರಬಹುದೇ ಎಂಬ ಚಿಂತೆಯನ್ನೂ ಮಾಡಿದ್ದಾರೆ. ಆ ಗುಡಿಯಲ್ಲಿ ಈಗ ಒಂದು ಶಿವಲಿಂಗವಿದ್ದು, ಇದನ್ನೂ ಪಂಢರಪುರವು ಶಿವ-ವಿಷ್ಣು ಎರಡೂ ಭಕ್ತರ ಕೇಂದ್ರವೆಂಬುದರ ಸೂಚಕವಾಗಿದೆ.

## ಪಂಢರಪುರಕ್ಕೆ ಶ್ರೀ ಚೈತನ್ಯ ಮಹಾಪ್ರಭುಗಳ ಭೇಟಿ



ಶ್ರೀ ಚೈತನ್ಯ ಮಹಾಪ್ರಭುಗಳು ತಮ್ಮ ದಕ್ಷಿಣ ಭಾರತ ಯಾತ್ರೆಯ ಸಂದರ್ಭದಲ್ಲಿ ಪಂಢರಪುರಕ್ಕೂ ಭೇಟಿ ನೀಡಿದ್ದರು.

ದಕ್ಷಿಣ ಭಾರತದ ಪೂರ್ವಭಾಗದಲ್ಲಿ ಸಂಚರಿಸಿದ ಮಹಾಪ್ರಭುಗಳು ಕೇರಳ, ಕರ್ನಾಟಕಗಳನ್ನು ಬಳಸಿ ಮಹಾರಾಷ್ಟ್ರವನ್ನು ತಲುಪಿದರು. ಚೈತನ್ಯ ಚರಿತಾಮೃತ (ಮಧ್ಯಲೀಲಾ 9:282-283) ದಲ್ಲಿ ನಿರೂಪಿಸಿರುವ ಹಾಗೆ, ಮಹಾಪ್ರಭುಗಳು ಪಂಢರಪುರಕ್ಕೆ ಭೇಟಿ ನೀಡಿ, ವಿಟ್ಠಲನ ದರ್ಶನ ಪಡೆದು ಆನಂದದಿಂದ ನರ್ತಿಸಿದರು.

ಶ್ರೀ ಚೈತನ್ಯ ಮಹಾಪ್ರಭುಗಳು ತಮ್ಮ ಆಧ್ಯಾತ್ಮಿಕ ಗುರುಗಳಾದ ಶ್ರೀ ಈಶ್ವರ ಪುರಿಯವರ ಶಿಷ್ಯರೂ, ತಮ್ಮ ದೈವ ಸಹೋದರರೂ ಆಗಿದ್ದ ಶ್ರೀರಂಗಪುರಿಗಳನ್ನು ಭೇಟಿಯಾಗಿದ್ದು ಪಂಢರಪುರದಲ್ಲಿಯೇ. ಶ್ರೀರಂಗಪುರಿಗಳು ಮಹಾಪ್ರಭುಗಳ ಸಹೋದರ ಶ್ರೀ ವಿಶ್ವರೂಪರು (ಶಂಕರಾರಣ್ಯ) ಪಂಢರಪುರದಲ್ಲಿಯೇ ತಮ್ಮ ಅವತಾರ ಲೀಲೆಯನ್ನು ಸಮಾಪ್ತಿಗೊಳಿಸಿದ ಸಂಗತಿ ಅರುಹಿದರು.

ತಮ್ಮ ದೈವ ಸಹೋದರರ ಸಾಂಗತ್ಯದಲ್ಲಿ ಮಹಾಪ್ರಭುಗಳು ಇಷ್ಟಗೋಷ್ಠಿ ನಡೆಸುತ್ತ ಹನ್ನೊಂದು ದಿನಗಳ ಕಾಲ ಪುರಂದರ ವಿಟ್ಠಲನ ಆ ದಿವ್ಯ ಕ್ಷೇತ್ರದಲ್ಲಿ ತಂಗಿದ್ದರು. ಈ ಸಂದರ್ಭದಲ್ಲಿ ಅವರು ಮಹಾರಾಷ್ಟ್ರದ ಶ್ರೇಷ್ಠ ಸಂತ ಎಂದು ಗುರುತಿಸಲ್ಪಡುವ ಶ್ರೀ ತುಕಾರಾಮರಿಗೆ ದೀಕ್ಷೆಯನ್ನು ನೀಡಿದರು. ಮಹಾಪ್ರಭುಗಳ

## ಶ್ರೀ ನಿತ್ಯಾನಂದ ಪ್ರಭುಗಳ ಭೇಟಿ



ಶ್ರೀ ನಿತ್ಯಾನಂದ ಪ್ರಭುಗಳು ಪಂಢರಪುರಕ್ಕೆ ಭೇಟಿ ನೀಡಿ, ಅಲ್ಲಿ ಶ್ರೀ ಲಕ್ಷ್ಮೀಪತಿ ತೀರ್ಥರನ್ನು ಭೇಟಿಯಾಗಿದ್ದರು, ಅವರ ಭೇಟಿಗೆ ಮುನ್ನ ಲಕ್ಷ್ಮೀಪತಿ ತೀರ್ಥರಿಗೆ ಬಲರಾಮನ ದರ್ಶನವಾಗಿತ್ತು. ನಿತ್ಯಾನಂದ ಪ್ರಭುಗಳನ್ನು ಕಂಡಾಗ ಅವರಿಗೆ ನಿತ್ಯಾನಂದ-ಬಲರಾಮರಿಬ್ಬರೂ ಒಬ್ಬರೇ ಎನ್ನುವ ಅರಿವಾಯಿತು.

ಶ್ರೀ ನಿತ್ಯಾನಂದ ಪ್ರಭುಗಳ ಗುರುಗಳಾದ ಶ್ರೀ ಮಾಧವೇಂದ್ರ ಪುರಿಗಳಿಗೆ ಶ್ರೀ ಲಕ್ಷ್ಮೀಪತಿ ತೀರ್ಥರು ಆಧ್ಯಾತ್ಮಿಕ ಗುರುಗಳಾಗಿದ್ದರು.

# ವಿಜಯನಗರದ ವಿಜಯವಿಟ್ಠಲ

ವಿಟ್ಠಲನ ವಿಷಯಕ್ಕೆ ಬರುವಾಗ, ಹಂಪೆಯನ್ನೂ, ಪಂಢರಪುರವನ್ನೂ ಒಟ್ಟಿಗೇ ಹೇಳಬೇಕಾಗುತ್ತೆ, ಹೇಗೆ ಮರಾಠಿಯಲ್ಲಿ ಅಭಂಗಗಳನ್ನು ರಚಿಸಿದ ಮರಾಠೀ ಸಂತರು ಪಂಢರಪುರದ ಮಹಿಮೆಯನ್ನು ಹಾಡಿ ಕೊಂಡಾಡಿದರೋ, ಕನ್ನಡದ ಹರಿದಾಸರೂ ಹಾಗೇ ಪಂಢರಪುರದ ವಿಟ್ಠಲನನ್ನು ನೆನೆದಿದ್ದಾರೆ. ಜೊತೆಗೆ ಹಂಪೆಯ ವಿಟ್ಠಲನನ್ನೂ ಕೂಡ. ದಾಸಕೂಟದ ಪ್ರಮುಖರಾದ ವ್ಯಾಸತೀರ್ಥರು, ಪುರಂದರ ದಾಸರು, ಕನಕದಾಸರು ಹಂಪೆ (ವಿಜಯನಗರದಲ್ಲಿ) ಹಲವಾರು ವರ್ಷಗಳನ್ನು ಕಳೆದರು. ಹಂಪೆಯ ವಿಜಯ ವಿಟ್ಠಲ ದೇವಾಲಯದ ಬದಿಯಲ್ಲೇ ಪುರಂದರ ಮಂಟಪವೂ ಇದೆ.

ಹಂಪೆಯ ವಿಜಯವಿಟ್ಠಲನೂ, ಪಂಢರಾಪುರದ ವಿಠೋಬನೂ ಒಬ್ಬನೇ ಎನ್ನುವುದೊಂದು ನಂಬಿಕೆ ಕರ್ನಾಟಕದಲ್ಲಿ ಪರಂಪರಾಗತವಾಗಿ ನಿಂತಿದೆ. ಕೆಲವರ ಪ್ರಕಾರ ಕೃಷ್ಣದೇವರಾಯನು ಪಂಢರಪುರದ ವಿಟ್ಠಲಮೂರ್ತಿಯನ್ನು ಅಲ್ಲಿಂದ ಬಲವಂತದಿಂದ ತಂದು ತಾನು ಕಟ್ಟಿಸಿದ ಹಂಪೆಯ ವಿಟ್ಠಲನ ಗುಡಿಯಲ್ಲಿ ಪ್ರತಿಷ್ಠಾಪಿಸಿದನಂತೆ. ಇನ್ನು ಕೆಲವರ ಪ್ರಕಾರ, ಪಂಢರಪುರದ ದೇವಾಲಯಕ್ಕೆ ಅನ್ಯಧರ್ಮೀಯ ರಾಜರಿಂದ ಇದ್ದ ಭೀತಿಯಿಂದ, ಮೂಲ ವಿಗ್ರಹವನ್ನು ಕಾಪಾಡಲು ಕೃಷ್ಣದೇವರಾಯನು ಮೂರ್ತಿಯನ್ನು ವಿಜಯನಗರಕ್ಕೆ ತಂದನಂತೆ. ಅನಂತರ ವಾರಕರಿ ಸಂಪ್ರದಾಯಕ್ಕೆ ಸೇರಿದ ಭಾನುದಾಸನೆಂಬ ಭಕ್ತ ಈ ಮೂರುತಿಯನ್ನು ಮತ್ತೆ ಪಂಢರಪುರಕ್ಕೆ ಕೊಂಡೊಯ್ದು ಮತ್ತೆ ನೆಲೆಗೊಳಿಸಿದನೆಂದು ಹೇಳುವರು. ಆದರೆ, ಇಲ್ಲಿ ಇನ್ನೂ ಇದಮಿತ್ಥಂ ಎಂದು ಹೇಳುವ ಸಂಶೋಧನೆ ಆಗಬೇಕಿದೆ. ಈ ಭಾನುದಾಸ ಸಂತ ಏಕನಾಥರ ಮುತ್ತಜ್ಜ ಎಂದು ಗುರುತಿಸಲಾಗಿದೆ.

ಈ ಕಥೆಗೆ ಆಧಾರವೆಂದು ಹೇಳುವ ಭಾನುದಾಸನ ಅಭಂಗ ಹೀಗಿದೆ:

ಜರೀ ಹೇ ಆಕಾಶ ವರ ಪಡೋ ಪಾಹೇ
ಬ್ರಹ್ಮ ಗೋಲ ಭಂಗ ಜಾಯ್
ವಡವಾನಲ ತ್ರಿಭುವನ ಕಾಯ್
ತರೀ ಮೀ ತುಝೀಚ್ ವಾಸ್ ಪಾಹೀನ ಗಾ ವಿಠೋಬಾ

ಆಕಾಶವೆ ಮೇಲೆ ಬಿದ್ದರೂ ಸರಿ
ಬ್ರಹ್ಮಾಂಡ ಚೂರುಚೂರಾದರೂ ಸರಿ
ಮೂಲೋಕ ಬೆಂಕಿಹತ್ತಿ ಉರಿದರೂ ಸರಿ
ನಾನಿನ್ನನೇ ಹೊಂದುವೆ ಓ ವಿಠೋಬಾ?
ನಾ ನಿನ್ನೇ ಕಾದುಕೊಂಬೆ ಓ ವಿಠೋಬಾ?

ಒಟ್ಟಿನಲ್ಲಿ ವಿಟ್ಠಲನು ಮಹಾರಾಷ್ಟ್ರ ಕರ್ನಾಟಕಗಳ ಶತಮಾನಗಳ ಚರಿತ್ರೆಯಲ್ಲಿ ಹಾಸುಹೊಕ್ಕಾಗಿ ಹೋಗಿದ್ದಾನೆ. ಇಂದಿಗೂ, ಮರಾಠಿ ಅಭಂಗಗಳು, ಕನ್ನಡ ದೇವರನಾಮಗಳ ಮೂಲಕ ವಿಟ್ಠಲನ ಮಹಿಮೆ ಪ್ರತಿದಿನ ಕೊಂಡಾಡಲ್ಪಡುತ್ತಿದೆ!

# ವಾರಕರಿ ಪಂಥ
# ನಾಮಸಂಕೀರ್ತನ ಸಂಪ್ರದಾಯ



ವಾರಕರಿ ಪಂಥ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರಚಲಿತವಿರುವ ಭಕ್ತಿಮಾರ್ಗದ ಒಂದು ಶಾಖೆ. ಮರಾಠಿಯಲ್ಲಿ ವಾರಕರಿ ಎಂದರೆ ಮತ್ತೆ ಮತ್ತೆ ಯಾತ್ರೆ ಮಾಡುವವರು ಎಂದು. ಈ ಸಂಪ್ರದಾಯದ ಅನುಯಾಯಿಗಳು ಪ್ರತಿ ವರ್ಷಕ್ಕೆ ಎರಡು ಬಾರಿ, ಆಷಾಢ ಮತ್ತು ಕಾರ್ತಿಕ ಮಾಸಗಳ ಶುಕ್ಲ ಪಕ್ಷದ ಏಕಾದಶಿಯಂದು, ನೂರಾರು ಮೈಲಿ ನಡೆದುಕೊಂಡು ಪಂಢರಪುರಕ್ಕೆ ಯಾತ್ರೆ ಹೋಗುವುದರಿಂದ ಈ ಹೆಸರು ಬಂದಿದೆ. ಈ ಯಾತ್ರೆಗೆ ಮರಾಠಿಯಲ್ಲಿ ವಾರಿ ಎಂದು ಕರೆಯುತ್ತಾರೆ. ಭಕ್ತಿಮಾರ್ಗದಲ್ಲಿ ಯಾರು ಯಾತ್ರೆ ಮಾಡುತ್ತಾರೋ ಅವರು ವಾರಕರಿಗಳು. ವಾರಕರಿಗಳ ಆರಾಧ್ಯದೈವ ಪಂಢರಪುರದ ವಿಟ್ಠಲ ಅಥವಾ ವಿಠೋಬಾ. ಇವನು ಶ್ರೀಕೃಷ್ಣನ ಇನ್ನೊಂದು ರೂಪ. ಮಹಾರಾಷ್ಟ್ರದ ಸಂತರುಗಳಾದ ಜ್ಞಾನೇಶ್ವರ, ತುಕಾರಾಮ, ಚೋಖಾ ಮೇಲಾ, ಮೊದಲಾದವರು ತಮ್ಮ ಪ್ರವಚನಗಳ ಈ ಸಂಪ್ರದಾಯವನ್ನು ಬಲಪಡಿಸಿದರು. ವಾರಕರಿಗಳು ತಮ್ಮ ತಮ್ಮ ಊರುಗಳಿಂದ ಈ ಸಂತರ ಪಲ್ಲಕ್ಕಿಗಳನ್ನು ಹೊತ್ತು ಪಂಢರಪುರಕ್ಕೆ ನಡೆದೇ ಸಾಗುತ್ತಾರೆ. ಇತಿಹಾಸಕಾರರ ಪ್ರಕಾರ ಈ ವಾರಕರಿ ಸಂಪ್ರದಾಯ 13ನೆಯ ಶತಮಾನದಲ್ಲಿದ್ದ ಜ್ಞಾನೇಶ್ವರನಿಗಿಂತ ಹಳೆಯದು. ಆದರೆ ಸಂತರ ಮೂಲ ಗ್ರಾಮಗಳಿಂದ ಪಲ್ಲಕ್ಕಿಗಳಲ್ಲಿ ಅವರ ಪಾದುಕೆಗಳನ್ನು ಒಯ್ಯುವ ಪದ್ಧತಿಯನ್ನು 1685ರಲ್ಲಿ ಪ್ರಾರಂಭಿಸಿದವನು ತುಕಾರಾಮನ ಕಿರಿಯ ಮಗ ನಯನ ಮಹಾರಾಜ. ಮುಂದೆ 1820ರ ದಶಕದಲ್ಲಿ ಹೈಬತ್ ರಾವ್ ಬುವಾ ಮತ್ತು ಸಂತ ತುಕಾರಾಮನ ಪೀಳಿಗೆಯವರು ಈ ಪದ್ಧತಿಯಲ್ಲಿ ಇನ್ನೂ ಬದಲಾವಣೆಗಳನ್ನು ತಂದರು. ಈಗ ಮಹಾರಾಷ್ಟ್ರದ ವಿವಿಧೆಡೆಗಳಿಂದ ಸುಮಾರು ನಲವತ್ತು ಪಲ್ಲಕ್ಕಿಗಳು ಪಂಢರಪುರ ತಲಪುತ್ತವೆ ಎಂದು ಅಂದಾಜಿವೆ.

13ನೆಯ ಶತಮಾನದಿಂದ 18ನೆಯ ಶತಮಾನದವರೆಗೆ, ಸುಮಾರು ಆರುನೂರು ವರ್ಷಗಳ ಕಾಲ, ವಾರಕರಿ ಪಂಥವು ಮಹಾರಾಷ್ಟ್ರ ಜನಸಾಮಾನ್ಯರ ಜೀವನದಲ್ಲಿ ಅಗಾಧ ಪರಿಣಾಮ ಬೀರಿತು. ದೇವರೇ ಪರಮ ಸತ್ಯ ಎಂದು ಪ್ರತಿಪಾದಿಸುವ ವಾರಕರಿಗಳು, ಎಲ್ಲಾ ಮಾನವರೂ ಸಮಾನರು ಎಂದೂ ನಂಬುತ್ತಾರೆ. ವೈಯುಕ್ತಿಕ ನೆಲೆಯಲ್ಲಿ ತ್ಯಾಗ, ಸರಳತೆ, ಕ್ಷಮೆ, ಇಂದ್ರಿಯಾಸಕ್ತಿಗಳನ್ನು ಗೆಲ್ಲುವುದು, ಶಾಂತಿಯುತ ಸಹಬಾಳ್ವೆ, ಅನುಕಂಪ, ಅಹಿಂಸೆ, ಪ್ರೇಮ, ವಿನಯ ಈ ವಿಷಯಗಳಿಗೆ ಈ ಪಂಥವು ಬಹಳ ಒತ್ತು ಕೊಡುತ್ತದೆ. ವಾರಕರಿಗಳು ಪರಸ್ಪರರನ್ನು ''ಭಗವಂತನ ಅಂಶವೆಂದೇ'' ತಿಳಿದು ನಮಸ್ಕರಿಸುವುದು ಇವರ ವಿನಯಶೀಲತೆಗೊಂದು ಉದಾಹರಣೆ. ಮರಾಠಿ ಸಂತರುಗಳು ಈ ಮೌಲ್ಯಗಳಿಂದ ಭಕ್ತಿಪಂಥದ ನೆಲೆಗಟ್ಟನ್ನು ಕಟ್ಟಿದರು. ಕೆಳಜಾತಿಯ ಜನರು ಮತ್ತು ಮಹಿಳೆಯರು ಜೀವನವನ್ನು ನೋಡುವ ದೃಷ್ಟಿಯನ್ನು ಬದಲಾಯಿಸುವ ಪ್ರಯತ್ನವನ್ನು ವಾರಕರಿ ಪಂಥ ಮಾಡಿತು. ಮಾನವನಿಗೆ ಲೌಕಿಕ ಜೀವನ ನಡೆಸುತ್ತಿರುವಾಗಲೂ, ನಿರ್ಲಿಪ್ತತೆ ಇರಬೇಕು ಮತ್ತು ಎಂತಹ ಕಷ್ಟ ಬಂದರೂ ತಾನು ನಂಬಿದ ಸತ್ಯವನ್ನು ಬಿಡದೆ ನಡೆಯಬೇಕು. ತುಕಾರಾಮನಂಥ ಸಂತರುಗಳ ಬರವಣಿಗೆಯಿಂದ ಜನಸಾಮಾನ್ಯರೂ ಇಂತಹ ಚಾರಿತ್ರ್ಯವನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಯಿತು.

ವಾರಕರಿ ಪಂಥದ ಸಂತರು ದೈವಸಾಕ್ಷಾತ್ಕಾರಕ್ಕೆ ಸುಲಭದ ದಾರಿಯನ್ನು ತೋರಿಸಿದರು. ಇವರಲ್ಲಿ ಪ್ರತಿಯೊಬ್ಬರೂ ಸರಳಭಾಷೆಯಲ್ಲಿರುವ ಸಣ್ಣ ಸಣ್ಣ ಗೀತೆಗಳ ಕಿರುಪುಸ್ತಕಗಳನ್ನು ಬರೆದರು. ಜನಗಳ ಬಾಯಲ್ಲಿ ಇದು ಹರಿಪಾಠ ಎಂಬ ಹೆಸರಿನಿಂದ ಜನಪ್ರಿಯವಾಯಿತು. ಪ್ರತಿಯೊಬ್ಬ ಸಂತನೂ ತನ್ನದೇ ಆದ ವಿಶಿಷ್ಟ ಗ್ರಾಮೀಣ, ಮಧುರ ಶೈಲಿಯಲ್ಲಿ ವಿಷ್ಣುನಾಮ ಜಪಿಸಿ. ಭಗವತ್ ಭಕ್ತಿಸೇವೆಯಲ್ಲಿ ತಲ್ಲೀನವಾಗಿ ಮನಸ್ಸು ಎಲ್ಲಾ ಆಸೆಗಳನ್ನೂ, ಕೆಟ್ಟ ಆಲೋಚನೆಗಳನ್ನೂ ಮೆಟ್ಟಿ ನಿಲ್ಲುತ್ತದೆ. ಈ ವಿಚಾರಧಾರೆ ಜನಸಾಮಾನ್ಯರು ಒಂದುಗೂಡಲಿಕ್ಕೆ ಸಹಾಯ ಮಾಡಿತು.

ಸುಮಾರು 800 ವರ್ಷಗಳ ಹಿಂದೆ, ಎಂದರೆ ಕ್ರಿ.ಶ. 1200 ರ ಅವಧಿಯಲ್ಲಿ ವಿಠೋಬನ ಭಕ್ತರಾದ ಸಂತ ಶ್ರೀ ಜ್ಞಾನೇಶ್ವರ ಮತ್ತು ಸಂತ ಶ್ರೀ ನಾಮದೇವರು 'ನಾಮಸಂಕೀರ್ತನ ಸಂಪ್ರದಾಯ'ವನ್ನು ವ್ಯಾಪಕಗೊಳಿಸಲು ಶ್ರಮಿಸಿದರು. ಅವರು ಆರಂಭಿಸಿದ ನಾಮಸಂಕೀರ್ತನ ಪೂಜೆ ಮತ್ತು ವಾರಕರಿ ಪದ್ಧತಿಗಳು ಇಂದಿಗೂ ಪ್ರಚಲಿತದಲ್ಲಿದ್ದು, ಸಮಾಜದ ಮೇಲು-ಕೀಳುಗಳನ್ನು ತೊಡೆದು ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಯಲು ಸಹಕಾರಿಯಾಗಿವೆ.

ವಿಠೋಬನ ಭಕ್ತಿಯಲ್ಲಿ ಮಹಾರಾಷ್ಟ್ರದ ಭಕ್ತರು ರಚಿಸಿರುವ ಅಭಂಗಗಳು ಹಲವು ಸಾವಿರಗಳನ್ನು ದಾಟುತ್ತವೆ. ಸಮಾಜದ ಎಲ್ಲ ಬಗೆಯ ಜಾತಿ-ಪಂಥಗಳ ಜನರು ಭಕ್ತಿ ಸಾಗರದಲ್ಲಿ ಮಿಂದು ಅಭಂಗ ಪೂಜೆ ಸಲ್ಲಿಸಿದ್ದಾರೆ. ಅಂಥವರಲ್ಲಿ; ಸಂತ ಜ್ಞಾನೇಶ್ವರ, ಸಂತ ನಾಮದೇವ, ಸಂತ ಏಕನಾಥ, ಜಾನಾಬಾಯಿ, ಸಂತ ತುಕಾರಾಮ, ಸತಿ ಸಕ್ಕೂಬಾಯಿ, ಘೋರ ಮೊದಲಾದವರು ಪ್ರಮುಖರು. ಇವರೇ ಅಲ್ಲದೇ, ಕರ್ಮಠ ಶೈವನಾಗಿದ್ದ ವಿಶೋಭ ಖೇಚರ, ಕ್ಷೌರಿಕ ವೃತ್ತಿಯ ಸೇನ, ಸೋನೆಗಾರ ನರಹರಿ, ತೋಟದ ಮಾಲಿ ಸಾದತ, ಗೋರ ಕುಂಬಾರ, ನರ್ತಕಿ ಕನ್ಹೋಪತ್ರ, ಮಹಾದಕುಲದ ಚೋಕಮೇಳ ಮುಸಲ್ಮಾನನಾಗಿದ್ದ ಶೇಖ್ ಮಹಮ್ಮದ್ ಇವರುಗಳು ಕೂಡ ವಿಟ್ಠಲನ ಸ್ತುತಿಯಲ್ಲಿ ಅಭಂಗಗಳನ್ನು ರಚಿಸಿದ್ದಾರೆ.

ಕರ್ನಾಟಕದ ದಾಸ ಪರಂಪರೆಯಲ್ಲಿ ಪ್ರಮುಖ ದಾಸರುಗಳು ವಿಟ್ಠಲನ ಸ್ತುತಿ, ವಿಟ್ಠಲನ ಅಂಕಿತದಲ್ಲಿ ಕೀರ್ತನೆಗಳನ್ನು ಹಾಡಿದ್ದಾರೆ.

# ಪಂಢರಪುರದ ವಿಟ್ಠಲ ಮತ್ತು ಪುರಂದರದಾಸರು

ಹರಿದಾಸರೆಲ್ಲ ಹಲವು ಯಾತ್ರಾಸ್ಥಳಗಳಿಗೆ ಯಾತ್ರೆ ಹೋಗುತ್ತಿದ್ದದ್ದು ಪದ್ಧತಿ. ಹೋದಲ್ಲೆಲ್ಲ ಅಲ್ಲಿನ ದೇವಾಲಯಗಳ ಬಗ್ಗೆ, ಅರ್ಚಾಮೂರ್ತಿಗಳ ಬಗ್ಗೆ ದೇವರನಾಮಗಳನ್ನು ಹಾಡುತ್ತಿದ್ದದ್ದು ಕೂಡ ವಾಡಿಕೆಯೇ. ಈ ಸ್ಥಳಗಳಲ್ಲಿ ತಿರುಪತಿ ಮತ್ತು ಪಂಢರಪುರ ಅತಿ ಹೆಚ್ಚು ಪ್ರಖ್ಯಾತವಾದವು, ಮತ್ತು ದಾಸರಿಗೆ ಅಚ್ಚುಮೆಚ್ಚಾದವು. ಪುರಂದರದಾಸರು ಅಲ್ಲಿಗೆ ಹಲವಾರು ಬಾರಿ ಹೋಗಿದ್ದಿರಬೇಕು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಅದರಲ್ಲೂ ಪಂಢರಪುರದ ವಿಟ್ಠಲನನ್ನೇ ಹೆಸರಿಸುವ ಹಲವಾರು ರಚನೆಗಳು ದೊರೆಯುತ್ತವೆ. ಒಂದು ರಚನೆಯಲ್ಲಿ ಅವರು ''ಡಂಗುರವ ಸಾರಿ ಹರಿಯ ಡಿಂಗರಿಗರೆಲ್ಲರೂ, ಭೂ ಮಂಡಲದೊಳು ಪಾಂಡುರಂಗ ವಿಟ್ಠಲ ಪರದೈವವೆಂದು'' ಎನ್ನುತ್ತಾರೆ. ಪಾಂಡುರಂಗ ಎನ್ನುವುದು ಪಂಡರಿಗೆ ಎನ್ನುವ ಹೆಸರಿನಿಂದಲೇ ಬಂದಿದೆ ಎನ್ನುವುದನ್ನು ಲೇಖನದಲ್ಲಿ ತೋರಿಸಿದೆ. ''ಕ್ಷೀರಾಬ್ಧಿ ಕನ್ನಿಕೆ ಶ್ರೀ ಮಹಾಲಕ್ಷ್ಮಿ ಆರಿಗೆ ವಧುವಾಗುವೆ'' ಎನ್ನುವ ರಚನೆಯಲ್ಲಿ ಹಲವು ಊರುಗಳಲ್ಲಿ ವಿಷ್ಣುವಿನ ಯಾವ ರೂಪಕ್ಕೆ ಒಲಿಯುವೆ ಎಂದು ಕೇಳುತ್ತಾ ''ಧರೆಯೊಳಗೆ ಪಾಂಡುರಂಗ ವಿಟ್ಠಲರಾಯಗೋ'' ಎನ್ನುತ್ತಾರೆ. ''ಶರಣು ನಿನಗೆ'' ಎಂದು ಆರಂಭವಾಗುವ ರಚನೆಯೊಂದರಲ್ಲಿ, ''ಪಾಂಡುರಂಗ ಕ್ಷೇತ್ರಪಾಲನೆ'' ಎಂದು ಹೇಳುತ್ತಾ, ಪಾಂಡುರಂಗ ಎನ್ನುವುದು ಸ್ಥಳನಾಮವಾಗಿರಬೇಕು ಎನ್ನುವ ತರ್ಕವನ್ನು ಸಿದ್ಧಗೊಳಿಸುತ್ತಾರೆ. ''ಕಟಿಯಲ್ಲಿ ಕರವಿಟ್ಟನು'' ಎನ್ನುವ ರಚನೆಯಲ್ಲಿ, ಅವನು ಪಾಂಡವರ ರಾಜಸೂಯ ಯಾಗದಲ್ಲಿ ಎಂಜಲೆಲೆ ಎತ್ತಿ ಸುಸ್ತಾಗಿಯೋ, ಅಥವಾ ಅರ್ಜುನನಿಗೆ ಸಾರಥ್ಯ ಮಾಡಿ ಕುದುರೆಗಳನ್ನು ತೊಳೆದ ಆಯಾಸದಿಂದಲೋ, ಅಥವಾ ಕಂಸನನ್ನು ಕೊಂದು ಉಂಟಾದ ಶ್ರಮದಿಂದಲೋ, ಅಥವಾ ಹಸುಗಳನ್ನು ಮೇಯಿಸಲು ಹಾಗೂ ಗೋಪಾಲರೊಡನೆ ಬೆಣ್ಣೆ ಕದಿಯಲು ಊರಲ್ಲೆಲ್ಲ ಸುತ್ತಾಡಿದ್ದರಿಂದಲೋ, ಸ್ವಲ್ಪ ಸುಧಾರಿಸಿಕೊಳ್ಳಲು ಸೊಂಟದ ಮೇಲೆ ಕೈಇಟ್ಟು ನಿಂತಿರಬಹುದೇ? ಎಂದು ವಿನೋದವಾಗಿ ಸೊಂಟದ ಮೇಲೆ ಕೈಯಿಟ್ಟ ವಿಟ್ಠಲನ ರೂಪವನ್ನು ವರ್ಣಿಸುತ್ತಾರೆ.

ಇನ್ನೊಂದು ರಚನೆಯು ಪುರಂದರ ದಾಸರ ಜೀವನದಲ್ಲಿ ನಡೆದ ಘಟನೆಯೊಂದರ ಬಗ್ಗೆ ಹೇಳುತ್ತದೆ ಎನ್ನುವ ನಂಬಿಕೆ ಹಲವು ಭಕ್ತರಲ್ಲಿ ಇದೆ. ಆ ಹಾಡು ಹೀಗಿದೆ.

**ಪಲ್ಲವಿ :** ಮುಯ್ಯಕ್ಕೆ ಮುಯ್ಯಿ ತೀರಿತು ಜಗದಯ್ಯ ವಿಜಯ ಸಹಾಯ ಪಂಢರೀರಾಯ!

**ಚರಣಗಳು :**

**ಸಣ್ಣವನೆಂದು ನಾ ನೀರು ತಾರೆಂದರೆ**
**ಬೆಣ್ಣೆಗಳ ಕೃಷ್ಣ ಮರೆಯ ಮಾಡಿ**
**ಚಿನ್ನದ ಪಾತ್ರೆಯ ನೀರು ತಂದಿತ್ತರೆ**
**ಕಣ್ಣು ಕಾಣದೆ ನಾ ಕೊಣೆದೆ ಪಂಢರಿರಾಯ ॥**

**ಎನ್ನ ಪೆಸರ ಹೇಳಿ ಸೂಳೆಗೆ ಕಂಕಣ**
**ವನ್ನು ನೀನು ಕೊಟ್ಟು ನಿಜವ ಮಾಡೆ**
**ಎನ್ನ ನೋಯಿಸಿ ಅಪರಾಧ ಭಂಡನ ಮಾಡಿ**
**ನಿನ್ನ ಮುಯ್ಯಕ್ಕೆ ಮುಯ್ಯ ತೋರಿದೆ ಪಂಢರಿರಾಯ ॥**

**ಭಕ್ತವತ್ಸಲನೆಂಬ ಬಿರುದು ಬೇಕಾದರೆ**
**ಕಿತ್ತು ಈಡಾಡೋ ಇನ್ನೊಂದು ಕಂಕಣವ**
**ಮುಕ್ತಿಗೆ ನೀನಲ್ಲದಾರನು ಕಾಣೆನು**
**ಮುಕ್ತೀಶ ಪುರಂದರ ವಿಟ್ಠಲ ಪಂಢರಿರಾಯ ॥**

ಈ ಎರಡು ಚರಣಗಳಿಗೆ ಸ್ವಲ್ಪ ಬೇರೆಯಾದ ಇನ್ನೊಂದು ಪಾಠಾಂತರವೂ ಇದೆ:

**ಎನ್ನ ಪೆಸರು ಮಾಡಿ ಸೂಳೆಗೆ ಕಂಕಣ**
**ವನ್ನು ನೀನಿತ್ತೆ ನಿಜರೂಪದಿ**
**ಎನ್ನ ಪೀಡಿಸಿ ಪರಮ ಭಂಡನ ಮಾಡಿ**
**ನಿನ್ನ ಮುಯ್ಯಕ್ಕೆ ಮುಯ್ಯಿ ತೀರಿಸಿಕೊಂಡೆಯಯ್ಯ ! ॥2।**

**ಭಕ್ತವತ್ಸಲನೆಂಬ ಬಿರುದು ಬೇಕಾದರೆ**
**ಭಕ್ತರಾಧೀನನಾಗಿರಬೇಡವೇ**
**ಯುಕ್ತಿಯಲಿ ನಿನ್ನಂಥ ದೇವರ ನಾಕಾಣೆ**
**ಮುಕ್ತೀಶ ಪುರಂದರವಿಠಲ ಪಂಢರಿರಾಯ ॥3॥**

ಈ ಹಾಡಿನ ಬಗ್ಗೆ ಹೇಳುವ ಕಥೆ ಹೀಗಿದೆ. ಒಮ್ಮೆ ಪುರಂದರದಾಸರು ರಾತ್ರಿ ತಡವಾಗಿ ಮನೆಗೆ ಮರಳುವ ಹೊತ್ತಿಗೆ, ಅವರಿಗೆ ಕೈಕಾಲು ತೊಳೆಯಲು ನೀರು ಕೊಡುತ್ತಿದ್ದ ಅಪ್ಪಣ್ಣನೆಂಬ ಶಿಷ್ಯ ನಿದ್ದೆ ಹೋಗಿಬಿಟ್ಟಿದ್ದ. ಅದಕ್ಕೆಂದೇ, ಸಾಕ್ಷಾತ್ ವಿಟ್ಠಲನೇ, ಅಪ್ಪಣ್ಣನ ರೂಪ ಧರಿಸಿ ನೀರು ತಂದುಕೊಟ್ಟನಂತೆ. ಆ ನೀರು ಹೆಚ್ಚು ಬಿಸಿಯಾಗಿದ್ದರಿಂದ, ಪುರಂದರದಾಸರಿಗೆ ಕೋಪಬಂದು ಆ ಪಾತ್ರೆಯಲ್ಲೇ ಅಪ್ಪಣ್ಣನಿಗೆ ಹೊಡೆದುಬಿಟ್ಟರಂತೆ. ಮರುದಿನ ಎದ್ದನಂತರ ಅಪ್ಪಣ್ಣನಲ್ಲಿ ತನ್ನ ಕೋಪಕ್ಕೆ ಕ್ಷಮಿಸೆಂದು ಕೇಳಲು ನೋಡಿದರೆ, ಅವನಿಗೇನೂ ಆಗೇ ಇಲ್ಲ! ರಾತ್ರಿ ತಾನು ನೀರು ಕೊಡಲೇ ಇಲ್ಲವೆಂದು ಅಪ್ಪಣ್ಣ ಹೇಳಿದಾಗ, ದಾಸರಿಗೆ ಇದು ಪಂಢರೀರಾಯ ವಿಟ್ಠಲನದ್ದೇ ಕೆಲಸವೆಂದು ತೋರಿತು. ಅದೇ ಕ್ಷಣ ದೇವಾಲಯಕ್ಕೆ ಹೋಗಿ ನೋಡಿದರೆ, ಮೂರ್ತಿಯ ಹಣೆಯಲ್ಲಿ ಗುಬುಟೊಂದು ಇತ್ತಂತೆ! ತಮ್ಮ ತಪ್ಪನ್ನು ಮನ್ನಿಸಬೇಕೆಂದು ದಾಸರು ಕ್ಷಮೆ ಕೋರಿದರು.

ಆ ರಾತ್ರಿ ವಿಟ್ಠಲನು ಪುರಂದರದಾಸರ ವೇಷತಾಳಿ ಊರಿನ ವೇಶ್ಯೆಯೊಬ್ಬಳ ಮನೆಗೆ ಹೋದನಂತೆ. ಅವಳ ನರ್ತನವನ್ನು ಮೆಚ್ಚಿ ಕೈಯಲ್ಲಿದ್ದ ಕಂಕಣವನ್ನು ಬಿಚ್ಚಿ ಆಕೆಗೆ ಕೊಟ್ಟುಬಿಟ್ಟನಂತೆ. ಮರುದಿನ ಅರ್ಚಕರು ಗರ್ಭಗುಡಿಯನ್ನು ತೆರೆದು ನೋಡಿದರೆ, ಪಾಂಡುರಂಗನ ಕೈಯ ಚಿನ್ನದ ಕಂಕಣವೇ ಇರಲಿಲ್ಲ. ಅದೇ ಸಮಯಕ್ಕೆ ಅಲ್ಲಿ ದೇವರ ದರ್ಶನಕ್ಕೆ ಬಂದ ಆ ನರ್ತಕಿಯ ಕೈಯಲ್ಲಿತ್ತು ಆ ಚಿನ್ನದ ಕಡಗ! ಅವಳನ್ನು ವಿಚಾರಿಸಲಾಗಿ ಪುರಂದರದಾಸರು ತನ್ನ ಮನೆಗೆ ಬಂದದ್ದನ್ನೂ, ತನಗೆ ಬಳುವಳಿಯಾಗಿ ಆ ಕಡಗವನ್ನು ಕೊಟ್ಟಿದ್ದನ್ನೂ ಅವಳು ಹೇಳಿದಳು.



ಇದನ್ನು ಕೇಳಿದ ದೇವಾಲಯದ ಅಧಿಕಾರಿಗಳು ದಾಸರನ್ನು ಕರೆತರಿಸಿ, ಕಂಬಕ್ಕೆ ಕಟ್ಟಿ ಚಾವಟಿಯೇಟು ಕೊಡಿಸಿದರಂತೆ. ಆ ಸಮಯದಲ್ಲಿ ಪುರಂದರದಾಸರ ಬಾಯಲ್ಲಿ ಹೊರಟ ಹಾಡಿದು ಎನ್ನುವುದು ಪರಂಪರೆಯಿಂದ ಬಂದ ನಂಬಿಕೆ. ನೀನು ಹೀಗೆ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡೆಯೇನು? ನಿನಗೆ ಭಕ್ತವತ್ಸಲನೆಂಬ ಬಿರುದು ಗಳಿಸಬೇಕಾಗಿದ್ದರೆ, ನೀನು ಈ ಲೋಕದಲ್ಲಿ ನಮಗೆ ಕೊಟ್ಟಿರುವ ಹುಟ್ಟು ಎಂಬ ಬಂಧನದ ಕಂಕಣವನ್ನು ಕಿತ್ತು ಎಸೆಯೋ ಎಂದು ವಿಟ್ಠನಿಗೇ ಸವಾಲು ಹಾಕಿದಂತಹ ಮಹಾತ್ಮರು ನಮ್ಮ ಪುರಂದರದಾಸರು!